ದಿನಾಂಕಃ 09.02.2023 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ.ಸಿ.ಸಿ. ವಕೀಲರಿಂದಃ**

ನನ್ನ ತಂದೆಗೆ 6 ಜನ ಮಕ್ಕಳು. ನನ್ನ ತಂದೆಗೆ ಒಟ್ಟು 5 ಎಕರೆ ಜಮೀನು ಇತ್ತು. ಇದರ ಹೊರತುಪಡಿಸಿ ಬೇರೆ ಯಾವ ಜಮೀನು ಇರಲಿಲ್ಲ. ಆ 5 ಎಕರೆ ಜಮೀನಿನ ಸ.ನಂ.250. ಸದರಿ ಜಮೀನು ನನ್ನ ಮತ್ತು ನನ್ನ ಸಹೋದರ ಮಧ್ಯೆ 12 ವರ್ಷಗಳ ಹಿಂದೆ ವಿಭಾಗವಾಗಿದೆ. 12 ವರ್ಷಕ್ಕಿಂತ ಮೊದಲು ನಾವೆಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದೆವು. ಸ.ನಂ.579 ರ ಒಟ್ಟು ವಿಸ್ತೀರ್ಣ 583 ಎಕರೆ. ಸ.ನಂ.79 ರಲ್ಲಿ ನನಗೆ 4 ಎಕರೆ 4 ಗುಂಟೆ ಜಮೀನು ಇದೆ. 1991 ರಲ್ಲಿ ನಾನು ಬಗರ್ ಉಖುಂ ಗಾಗಿ ಅರ್ಜಿ ಸಲ್ಲಿಸಿರುತ್ತೇನೆ. ಆ ಬಗ್ಗೆ ತೋರಿಸಲು ದಾಖಲು ಹಾಜರುಪಡಿಸಿಲ್ಲ.

ನನ್ನ ಒಬ್ಬ ಸಹೋದರ ವಕೀಲ ವೃತ್ತಿ ಮಾಡುತ್ತಿದ್ದಾರೆ ಎಂದರೆ ಸರಿ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಬಗರ್ ಉಖುಂ ಗಾಗಿ ಅರ್ಜಿ ಸಲ್ಲಿಸಿದಾಗ 25 ವರ್ಷವಾಗಿತ್ತು. ನಾನು ಆ ರೀತಿ ಅರ್ಜಿ ಸಲ್ಲಿಸುವ ಕಾಲಕ್ಕೆ ಬಗರ್ ಉಖುಂ ಕೇಳಿದ ಜಾಗದ ಅಕ್ಕಪಕ್ಕ ನನಗೆ ಸೇರಿದ ಜಮೀನು ಇರಲಿಲ್ಲ. ದಾವಾ ಆಸ್ತಿಯ ಚೆಕ್ಕುಬಂದಿ ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ನಿಪಿ-4 ರಲ್ಲಿ ದಾವಾ ಆಸ್ತಿಯ ಚೆಕ್ಕುಬಂದಿ ಇದೆ. ಸಾಕ್ಷಿಗೆ ನಿಪಿ-4 ನ್ನು ತೋರಿಸಲಾಗಿ ಅದರಲ್ಲಿ ಚೆಕ್ಕುಬಂದಿ ನಮೂದಿಸಿಲ್ಲ ಎಂದರೆ ತೋರಿಸಿಲ್ಲ ಎಂದು ನುಡಿಯುತ್ತಾರೆ. ನಿಪಿ-3 ನ್ನು ಕಾಫೀ ಬೆಳೆ ಬೆಳೆದರೆ ಮಾತ್ರ ಕೊಡುತ್ತಾರೆ ಎಂದರೆ ನಾನು ಕಾಫೀ ಬೆಳೆದಿದ್ದೇನೆ. ಕಾಫೀ ಬೋರ್ಡ್ ನವರು ದಾವಾ ಆಸ್ತಿಗೆ ಬೇಟಿ ನೀಡಿ ಸರ್ವೇ ಮಾಡಿ ನಿಪಿ-3 ನ್ನು ಕೊಟ್ಟಿರುತ್ತಾರೆ. ನಾನು ಹೇಳಿದಂತೆ ಕಾಫೀ, ಮೆಣಸು, ಬಾಳೇ ಮತ್ತು ಅಡಿಕೆ ಬೆಳೆದ ಬಗ್ಗೆ ನಿಪಿ-3 ರಲ್ಲಿ ಹೇಳಿ ಬರೆಸಿಲ್ಲ ಎಂದರೆ ನಾನು ಬೆಳೆ ಬೆಳೆದಿದ್ದೇನೆ. ನಾನು ಬಾಳೇ ಬೆಳೆದ ಬಗ್ಗೆ ದಾವಾ ಸಲ್ಲಿಸಿದ್ದೇನೆ ಎಂದರೆ ನಾನು ಬಾಳೇ ಬೆಳದಿಲ್ಲ.

ನಮೂನೆ 50 ಮತ್ತು 53 ರಲ್ಲಿ ನಾವು ಯಾವ ಬೆಳೆ ಬೆಳೆದಿರುತ್ತೇವೋ ಆ ಬಗ್ಗೆ ನಮೂದಿಸುತ್ತಾರೆ ಎಂದರೆ ಸಾಕ್ಷಿಯು ಕಾಫೀ, ಅಡಿಕೆ ಮತ್ತು ಮೆಣಸು ಬೆಳೆದಿರುವುದಾಗಿ ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ವಾಸದ ಮನೆ ಇದೆ. ದಾವಾ ಆಸ್ತಿಯಲ್ಲಿ 15 ಗುಂಟೆ ಕಣ ಮಾಡಿದ್ದೇನೆ. ದಾವಾ ಆಸ್ತಿಯ ಕೂಲಿ ಕೆಲಸದವರು ವಾಸಿಸಲು 60 ಅಡಿ ಉದ್ದ 20 ಅಡಿ ಅಗಲ ವಿಸ್ತೀರ್ಣದ ಲೈನ್ ಇದೆ. ದಾವಾ ಆಸ್ತಿಯಲ್ಲಿ 25-30 ವರ್ಷದಿಂದ ಕಣ ಮತ್ತು ಲೈನ್ ಇದೆ. ನಾನು ನಿರ್ಮಾಣ ಮಾಡಿದ ಮನೆಗೆ ಇ-ಸ್ವತ್ತು ಮಾಡಿಸಿದ್ದೇನೆ. ಆ ಬಗ್ಗೆ ದಾಖಲು ಹಾಜರುಪಡಿಸಿಲ್ಲ. ಆ ದಾಖಲೆಗಳನ್ನು ಹಾಜರುಪಡಿಸಲು ಈಗ ತೊಂದರೆಯಾಗುತ್ತದೆ. ನಾನು ಹೇಳಿದ ಮನೆ ಹಾಗೂ ಕಣ 30

ಗುಂಟೆ ವಿಸ್ತೀರ್ಣದ ಜಾಗದಲ್ಲಿದೆ. ಮನೆಯ ಉತ್ತರಕ್ಕೆ ಲೈನ್ ಮತ್ತು ಕಣ, ಮನೆಯ ಪೂರ್ವಕ್ಕೆ ವಿವೇಕ್ ಗೌಡರ ತೋಟ ಇದೆ. ವಿವೇಕ್ ಗೌಡ ನನ್ನ ತಮ್ಮ. ನನ್ನ ಮನೆಯ ಉತ್ತರ ಮತ್ತು ದಕ್ಷಿಣ ಕಡೆಗಳಿಗೆ ಹಳ್ಳ ಹರಿಯುತ್ತದೆ. ಆ ಹಳ್ಳಗಳು ದಾವಾ ಸ್ವತ್ತಿನಿಂದ ಪ್ರಾರಂಭವಾಗಿ ನನ್ನ ತಮ್ಮನ ಜಮೀನಿನಲ್ಲಿ ಅಂತ್ಯವಾಗುತ್ತದೆ ಎಂದರೆ ಸರಿ. ನನ್ನ ಜಾಗದಲ್ಲಿ ಹಳ್ಳ ಇಲ್ಲ, ಆದರೆ ಉತ್ತರ ದಿಕ್ಕಿನಲ್ಲಿ ಇರುವ ಹೊಳೆ ಪಶ್ಚಿಮ ದಿಕ್ಕಿಗೆ ಹೋಗುತ್ತದೆ. ನನ್ನ ಜಾಗದ ಸುತ್ತ ಹಳ್ಳ ಹರಿಯುವುದಿಲ್ಲ ಎಂದರೆ ಸರಿಯಲ್ಲ. ನನ್ನ ತೋಟದ ಒಳಗೆ ಕೊರಕಲು ಇಲ್ಲ.

ನನ್ನ ಜಾಗ ಈಗ ಪೋಡಿಯಾಗಿದೆ ಎಂದರೆ ಸರಿ. ಪೋಡಾದ ನಂತರ ಹೊಸದಾಗಿ ಸ.ನಂ.345 ಎಂದಾಗಿದೆ. ಪೋಡಿ ಮಾಡುವ ಸಮಯದಲ್ಲಿ ನನ್ನ ಮನೆ, ಕಣ ಮತ್ತು ಲೈನ್ ಸೇರಿ ಪೋಡಿ ಮಾಡಿರುತ್ತಾರೆ. ಸಾಮಾನ್ಯವಾಗಿ ಪೋಡಿ ಮಾಡುವಾಗ ಹಳ್ಳ, ಮನೆ ಮತ್ತು ಹೊಂಡ, ರಸ್ತೆ ಕೊರಕಲು ಇವುಗಳನ್ನು ಕಳೆದು ಕೊರಕಲು ಮಾಡುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗಳ ಜಾಗವನ್ನು ನಾನು ಸರ್ವೇ ಮಾಡಿಸಿಲ್ಲ. ನನ್ನ ತಮ್ಮ ವಿವೇಕ್‌ಗೌಡರವರಿಗೆ ಸ.ನಂ.79 ರಲ್ಲಿ 4 ಎಕರೆ 4 ಗುಂಟೆ ಜಮೀನು ಇದೆ, ಸದರಿ ಸ.ನಂ. ಹೊಸ ಸ.ನಂ.43 ಆಗಿದೆ. ದಾವಾ ಜಮೀನು ಹೊಸದಾಗಿ ಪೋಡಾದ ನಂತರ ಅದಕ್ಕೆ ಸ.ನಂ.345 ಎಂದು ನಿಗದಿಪಡಿಸಿದ್ದು ಅದರ ಪೂರ್ವಕ್ಕೆ ಸ.ನಂ.344 ರ ಜಮೀನು ಇದೆ ಎಂದರೆ ಗೊತ್ತಿಲ್ಲ. ಸದರಿ ಸರ್ವೇ ನಂಬರ್ ನ ಉತ್ತರಕ್ಕೆ ನನ್ನ ತಮ್ಮ ಕೆ.ಎ. ವಿರುಪಾಕ್ಷ ರವರ ಸ.ನಂ.343, ದಕ್ಷಿಣಕ್ಕೆ ನನ್ನ ತಮ್ಮ ವಿಜೇಂದ್ರ ಸ.ನಂ.346 ರ ಜಮೀನು ಇದೆ ಎಂದರೆ ಸರಿ.

ಸ.ನಂ.79 ರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದವರಾದ 38 ಜನರಿಗೆ ಜಮೀನು ಮೀಸಲಾಗಿದೆ ಎಂದರೆ ಸರಿ. ಆ 38 ಜನರ ಪೈಕಿ ನಾನು ಹಾಗೂ ನನ್ನ ಸಹೋದರರು ಇರುವುದಿಲ್ಲ. ದಾವಾ ಆಸ್ತಿಯಲ್ಲಿರುವ ನನ್ನ ಮನೆಗೆ ಕಂದಾಯ ಪಾವತಿ ಮಾಡುತ್ತಿಲ್ಲ. ಅದು ಎರಡು ಅಂತಸ್ತಿನ ಮನೆ. ಆ 38 ಜನರ ಪೈಕಿ ಪ್ರತಿವಾದಿಗಳು ಇದ್ದರು ಎಂದರೆ ಸರಿ ಆದರೆ ಯಾರಿಗೂ ಜಮೀನು ಮಂಜೂರಾಗಿಲ್ಲ. ಆ ಬಗ್ಗೆ ಆದೇಶ ಪ್ರತಿಗಳನ್ನು ಹಾಜರುಮಾಡಿಲ್ಲ. ಮಂಜೂರಾತಿ ರದ್ದಾದ ವರ್ಷ ಯಾವುದೆಂದು ನನಗೆ ಗೊತ್ತಿಲ್ಲ. 38 ಜನರ ಪೈಕಿ ಮಂಜೂರಾದ ಜಮೀನಿನಲ್ಲಿ ಹಾಗೂ ಆ ಬಾಬ್ತು ಸ್ಕೆಚ್ ನಲ್ಲಿ ನಮೂದಿಸಿರುವ ಜಮೀನಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಗೊತ್ತಿಲ್ಲ.

ನಮೂನೆ 53 ರಂತೆ ದಾವಾ ಜಮೀನನ್ನು ನನಗೆ ಮಂಜೂರು ಮಾಡುವ ಸಮಯಕ್ಕೆ ತಹಶೀಲ್ದಾರ್, ರೆವಿನ್ಯೂ ಇನ್ಸಪೆಕ್ಟರ್, ವಿಲೇಜ್ ಅಕೌಂಟೆಂಟ್ ಬಂದಿದ್ದರು. ಆ ಬಗ್ಗೆ ವರದಿಯನ್ನು ಹಾಜರುಮಾಡಿಲ್ಲ. ದಾವಾ ಜಮೀನು ನನಗೆ ಮಂಜೂರಾದ ಬಗ್ಗೆ ಮಂಜೂರಾತಿ ಕಡತ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿಯು ಕಡತ ಹಾಜರುಪಡಿಸಿರುವುದಾಗಿ ನುಡಿಯುತ್ತಾರೆ. ನನ್ನ ಮನೆಯ ಸುತ್ತ ಕಾಂಪೌಂಡ್ ಹಾಕಿಲ್ಲ, ಆದರೆ ತಂತಿ ಹಾಕಿದೆ. ದಾವಾ ಆಸ್ತಿ

ಹಾಗೂ ನನ್ನ ವಿವೇಕ್ ರವರ ಜಮೀನಿನ ಮಧ್ಯೆ ಬೇಲಿ ಹಾಕಿಲ್ಲ. ದಾವಾ ಆಸ್ತಿ ಹಾಗೂ ನನ್ನ ತಮ್ಮ ವಿವೇಕ್ ರವರ ಜಮೀನಿನ ಮಧ್ಯೆ ರಸ್ತೆ ಇಲ್ಲ ಟ್ರ್ಯಾಕ್ಟರ್ ಸಂಚರಿಸಲು ದಾರಿ(Rote) ಇದೆ. ನನ್ನ ಮನೆಯ ದಕ್ಷಿಣದ ಕಡೆಗೆ ಕಬ್ಬಿಣದ ಗೇಟ್ ಇದೆ. ಗೇಟಿನ ಹೊರಭಾಗದ ಯಾವ ಭಾಗದ ರಸ್ತೆ ಇದೆ ಎಂದರೆ ದಕ್ಷಿಣ ದಿಕ್ಕಿಗೆ ಮನೆಗೆ ಬರಲು ಹಾಗೂ ಉತ್ತರ ದಿಕ್ಕಿಗೆ ತೋಟಕ್ಕೆ ಹೋಗಲು ದಾರಿ ಇದೆ.

ನಿಪಿ-4 ಯಾವ ದಿನಾಂಕದಂದು ಬರೆಯಲಾಗಿದೆ ಎಂದು ನೆನಪಿಲ್ಲ. ಅದರಲ್ಲಿ ದಿನಾಂಕ ನಮೂದಾದ ಬಗ್ಗೆ ನೆನಪಿಲ್ಲ. ಸಾಕ್ಷಿಗೆ ನಿಪಿ-4 ನ್ನು ತೋರಿಸಿ ಅದರಲ್ಲಿ ದಿನಾಂಕ ನಮೂದಾಗಿದೆಯೇ ಎಂದು ಕೇಳಿದಾಗ ಕಾಣುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಕನ್ನಡ ಓದುವುದಕ್ಕೆ ಸಾದಾರಣವಾಗಿ ಬರುತ್ತದೆ. ದಾವಾ ಆಸ್ತಿ ಪೋಡಾದ ಬಗ್ಗೆ ಸ್ಕೆಚ್ ಹಾಜರಪಡಿಸಲು ತೊಂದರೆ ಇಲ್ಲ. ದಾವಾ ಆಸ್ತಿಯಲ್ಲಿ ಎಷ್ಟು ಗುಂಟೆ ಕರಾಬು ಇದೆ ಎಂದು ಗೊತ್ತಿಲ್ಲ. ದಾವಾ ಆಸ್ತಿಯ ಈಗಿನ ಪಹಣಿಯನ್ನು ಪರಿಶೀಲಿಸಿದ್ದೀರ ಎಂದರೆ ಸಾಕ್ಷಿಯ ಸರ್ಕಾರಿ ಪಹಣಿಯಲ್ಲಿ ಕರಾಬು ನಮೂದಾಗಿದ್ದು ಈಗಿನ ಪಹಣಿಯಲ್ಲಿ ನಮೂದಾಗಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿ ವಿಭಾಗದ ಮೂಲಕ ಬಂದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದ ಎಂ.ಆರ್.ಸಂ.2/2003-04 ಇದನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನಗೂ ಹಾಗೂ ನನ್ನ ಸಹೋದರರಿಗೂ ಮಂಜೂರಾತಿಯಿಂದ ತಲಾ 4 ಎಕರೆ 4 ಗುಂಟೆ ಜಮೀನು ಹಾಗೂ ತಂದೆಯಿಂದ ತಲಾ 30 ಗುಂಟೆ ಜಮೀನು ಬಂದಿದೆ. ಸದರಿ 4 ಎಕರೆ 4 ಗುಂಟೆ ಜಮೀನುಗಳು ಬೇರೆ ಬೇರೆ ಕಡೆ ಇದ್ದು ಒಂದೇ ಚೆಕ್ಕುಬಂದಿಯಲ್ಲಿ ಇಲ್ಲ. ಸಾಕ್ಷಿಯು ಮುಂದುವರೆದು ಅದಕ್ಕೆ ಬೇಲಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಮ್ಮ ಕೆ.ವಿರುಪಾಕ್ಷ ರವರ ಜಮೀನಿನ ದಕ್ಷಿಣ ದಿಕ್ಕಿಗೆ ನನ್ನ ಜಮೀನು ಇದೆ. ಸಾಕ್ಷಿಯು ಮುಂದುವರೆದು ವಿವೇಕ್ ರವರ ಜಮೀನು ಪೂರ್ವ ದಿಕ್ಕಿಗೆ ಇದೆ ಎಂದು ನುಡಿಯುತ್ತಾರೆ. ನನ್ನ ತಮ್ಮ ಕೆ.ಎ. ವಿಜೇಂದ್ರ ರವರ ಉತ್ತರ ದಿಕ್ಕಿಗೆ ನನ್ನ ಜಮೀನು ಇಲ್ಲ ಎಂದರೆ ಸರಿಯಲ್ಲ. ಆದರೆ ಅವರ ಹಾಗೂ ನನ್ನ ಜಮೀನಿನ ಮಧ್ಯೆ ಒಂದು ರಸ್ತೆ, ಎರಡು ಮನೆ ಶಾಂತಮ್ಮ ರವರ ತೋಟ ಇದೆ. ಆ ರಸ್ತೆ ನನ್ನ ಮನೆಯ ವರೆಗೂ ಸಿಮೆಂಟ್ ರಸ್ತೆಯಾಗಿದ್ದು ಮುಂದಕ್ಕೆ ತೋಟಕ್ಕೆ ಹೋಗುವ ರಸ್ತೆ ಮಣ್ಣಿನದ್ದಾಗಿದೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದರಿಂದ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.